**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ**

ಸಿಸಿ.189/2015

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | **ಪಿ ಬಿ ಹನುಮಂತಪ್ಪ** | ಸಿಡಬ್ಲೂಃ **07** |
| ತಂದೆ ಹೆಸರು ಃ | | **ಲೇಟ್ ಆರ್ ಪಿ ಭೀಮಪ್ಪ** | ಪಿಡಬ್ಲೂಃ **02** |
| ವಯಸ್ಸು | ಃ | 63 **ವರ್ಷ** | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | ಃ | **ನಿವೃತ್ತ ಆರಕ್ಷಕ ನಿರೀಕ್ಷಕರು** | 24.01.2026. |
| ವಾಸ ಸ್ಥಳ | ಃ | **ಪಾವಗಡ, ತುಮಕೂರು ಜಿಲ್ಲೆ.** | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ದಿಃ**08.11.2012** ರಿಂದ **03.07.2014** ರವರೆಗೆ ನಾನು ಶಿಡ್ಲಘಟ್ಟ ಗ್ರಾಮಂತರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಸಿದ್ದೇನೆ.

**2.** ದಿಃ**10.04.2014** ರಂದು ಈ ಪ್ರಕರಣದ ಕಡತವನ್ನು ಚಾ.ಸಾ.**06** ರವರಿಂದ ಪಡೆದುಕೊಂಡು, ಪರಿಶೀಲಿಸಿ ತನಿಖೆ ಮುಂದುವರೆಸಿರುತ್ತೇನೆ. ದಿಃ**10.05.2014** ರಂದು ಚಾ.ಸಾ.**1** ರವರ ಮನೆಯ ಬಳಿ ಚಾ.ಸಾ.**3** ಮತ್ತು **4** ರವರ ಸಮಕ್ಷಮ ಮದ್ಯಾಹ್ನ **12** ರಿಂದ **1** ಗಂಟೆ ಸಮಯದ ವರೆಗೆ ನಿ.ಪಿ.**1** ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ನಿ.ಪಿ.**1** ರಲ್ಲಿ ನನ್ನ ಸಹಿ ಇದ್ದು ಸಹಿಯನ್ನು ನಿ.ಪಿ.**1**(ಬಿ) ಎಂದು ಗುರುತಿಸಲಾಯಿತು. ಅದೇ ದಿನ ಚಾ.ಸಾ.**1** ರಿಂದ **3** ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಜಾಮೀನಿನ ಪ್ರತಿಯನ್ನು ನ್ಯಾಯಾಲಯದ ಪಿಸಿ ರವರು ಹಾಜರು ಪಡಿಸಿದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈ ಹಂತದಲ್ಲಿ ನನಗೆ ವರ್ಗಾಣೆ ಆದ್ದರಿಂದ ಕಡತವನ್ನು ಚಾ.ಸಾ.**8** ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟಿ ಸವಾಲುಃ ಆರೋಪಿಗಳ ಪರ ಶ್ರೀ ಡಿ ವಿ ಎಸ್ ವಕೀಲರಿಂದಃ

ನನಗೆ ಚಾ.ಸಾ.**1** ರಿಂದ **3** ರವರು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಘಟನಾ ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.**1** ನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿದಾರರಿಗೆ ಅನುಕೂಲವಾಗಲೀ ನಿ.ಪಿ.**1** ನ್ನು ಸೃಷ್ಟಿ ಮಾಡಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ ಇದೆ.**

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.